ಸಾಕ್ಷಿಯನ್ನು ದಿಃ-25.05.2023 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನಾನು ಪಿ.ಎಸ್.ಸಿ.ಎಸ್. ನಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದೇನೆ. ಸುಮಾರು 10 ವರ್ಷದ ಹಿಂದೆ ಗೋವಿಂದರಾಜುವಿನಿಂದ ಪ್ರತಿವಾದಿ ಪರಿಚಯವಿರುತ್ತಾರೆ. ಪ್ರತಿವಾದಿ ಪಿ.ಡಬ್ಲ್ಯೂ.ಡಿ ಕಛೇರಿಯಲ್ಲಿ ಬೆರಳಚ್ಚುಗಾರರಾಗಿ ಕೆಲಸ ಮಾಡುತ್ತಿದ್ದಾರೆ. ನಾನು ಪ್ರತಿವಾದಿಗೆ ಸಾಲ ಕೊಡುವಾಗ ಸಾಕ್ಷಿದಾರರಾಗಿ ಕೆ.ರಾಜು ಮತ್ತು ಶಿವನಂಜೇಗೌಡ ಹಾಜರಿದ್ದರು. ನಾನು ಪ್ರತಿವಾದಿಗೆ ಮದ್ಯಾಹ್ನ 12-30 ರ ಸಮಯದಲ್ಲಿ ಎಸ್.ಬಿ.ಐ ಬ್ಯಾಂಕ್, ಮಳವಳ್ಳಿ ಆವರಣದಲ್ಲಿ ಕೊಟ್ಟಿರುತ್ತೇನೆ. ನಿ.ಪಿ-1 ಮತ್ತು 2 ನ್ನು ನೊಂದಣಿ ಕಛೇರಿ ಹೊರಗಡೆ ಬರೆದಿರುತ್ತಾರೆ. ನಿ.ಪಿ-1 ಮತ್ತು 2 ಕ್ಕೆ ಶಿವನಂಜೇಗೌಡ ಮತ್ತು ಕೆ.ರಾಜು ಸಹಿ ಮಾಡಿರುತ್ತಾರೆ.

2. ನಿ.ಪಿ-1 ನ್ನು ಬರೆಯಲು ಪ್ರತಿವಾದಿ ಮಾಹಿತಿ ಕೊಟ್ಟಿರುತ್ತಾರೆ. ನಿ.ಪಿ-1 ಮತ್ತು 2 ನ್ನು ಬರೆದ ನಂತರ ಪ್ರತಿವಾದಿಗೆ ಹಣ ಕೊಟ್ಟಿರುತ್ತೇನೆ. ನಾನು 500 ಮುಖ ಬೆಲೆಯ 160 ನೋಟುಗಳನ್ನು ಪ್ರತಿವಾದಿಗೆ ಕೊಟ್ಟಿರುತ್ತೇನೆ. 20,000/- ಕ್ಕಿಂತ ಹೆಚ್ಚಿನ ಹಣವನ್ನು ವ್ಯವಹರಿಸಬೇಕಾದರೆ ಚೆಕ್ ಮುಖಾಂತರ ಕೊಡಬೇಕು ಎಂದು ಆರ್.ಬಿ.ಐ ನಿಯಮ ಇದೆ ಎಂದರೆ ಗೊತ್ತಿಲ್ಲ. ನಿ.ಪಿ-1 ಮತ್ತು 2 ನ್ನು ಮದ್ಯಾಹ್ನ 01-00 ಗಂಟೆಯಿಂದ 01-15 ರವರೆಗೆ ಬರೆಯಲಾಗಿದೆ. ಸಾಕ್ಷಿದಾರರನ್ನು ಪ್ರತಿವಾದಿ ಕರೆದುಕೊಂಡು ಬಂದಿದ್ದರು. ಸಾಕ್ಷಿದಾರರನ್ನು 01-00 ಗಂಟೆಯಿಂದ 01-15 ರ ಸಮಯದಲ್ಲಿ ಬಂದಿರುತ್ತಾರೆ. ಹಣ ಪಾವತಿ ಮಾಡಿದ ಬಗ್ಗೆ ಪತ್ರ ಬರಹಗಾರರು ಬರೆದಿರುತ್ತಾರೆ. ಆದರೆ ಮುಖ ಬೆಲೆಯ ಬಗ್ಗೆ ಗೊತ್ತಿಲ್ಲ. ನಾನು ಪತ್ರ ಬರೆಯುವ ಜಾಗಕ್ಕೆ ಹೋದ ನಂತರ ಸಾಕ್ಷಿದಾರರನ್ನು ಪ್ರತಿವಾದಿ ಕರೆದುಕೊಂಡು ಬಂದಿರುತ್ತಾರೆ. ಪತ್ರವನ್ನು ಪತ್ರ ಬರಹಗಾರರ ಹತ್ತಿರ ಪ್ರತಿವಾದಿಯೇ ತೆಗೆದುಕೊಂಡಿರುತ್ತಾರೆ. ಪ್ರತಿವಾದಿಯೇ ಬಿಕ್ಲಂದಾರರಿಗೆ ಶುಲ್ಕವನ್ನು ಕೊಟ್ಟಿರುತ್ತಾರೆ. ನಿ.ಪಿ-1

ಮತ್ತು 2 ರಲ್ಲಿ ಅಂಟಿಸಿದ ಸ್ಟ್ಯಾಂಪನ್ನು 2003 ರಲ್ಲಿ ರದ್ದುಪಡಿಸಿರುತ್ತಾರೆ ಎಂದರೆ ಗೊತ್ತಿಲ್ಲ. ನಾನು ಪತ್ರ ಬರೆದ ನಂತರ ಪ್ರತಿವಾದಿಗೆ ಹಣ ಕೊಟ್ಟಿರುತ್ತೇನೆ. ರೆವಿನ್ಯೂ ಸ್ಟ್ಯಾಂಪ್ ಬಿಕ್ಲಂದಾರರಿಂದ ಪ್ರತಿವಾದಿ ಖರೀದಿ ಮಾಡಿರುತ್ತಾರೆ.

**3.** ನಾನು ಬಡ್ಡಿಯಂತೆ ಸಾಲ ಕೊಡಲು ಪರವಾನಿಗೆ ಪಡೆದಿಲ್ಲ. ನಾನು ಸಾಲವನ್ನು ಕೊಡುವುದಕ್ಕಿಂತ 1 ವಾರದ ಮುಂಚೆ ಪ್ರತಿವಾದಿ ಸಾಲ ಕೇಳಿರುತ್ತಾರೆ. ನಾನು ಮಂಡ್ಯ ಎಂ.ಡಿ.ಸಿ.ಸಿ ಬ್ಯಾಂಕಿಗೆ ಹೋದಾಗ ಪ್ರತಿವಾದಿ ಅಲ್ಲಿಗೆ ಬಂದಿದ್ದು ಆ ಸಮಯದಲ್ಲಿ ನನಗೆ ಹಣ ಕೇಳಿರುತ್ತಾರೆ. ನಂತರ ನಾನು ತಿಳಿಸುತ್ತೇನೆಂದು ಹೇಳಿ ದಿನಾಂಕ 08-11-2012 ರಂದು ಪ್ರತಿವಾದಿಗೆ ಹಣ ಕೊಟ್ಟಿರುತ್ತೇನೆ. ಗೋವಿಂದರಾಜು ಬಂಡೂರಿನಲ್ಲಿ ಕಾರ್ಯದರ್ಶಿಯಾಗಿರುತ್ತಾರೆ. ನನಗೆ ಗೋವಿಂದರಾಜು ಸುಮಾರು 15 ವರ್ಷಗಳಿಂದ ಪರಿಚಯವಿರುತ್ತಾರೆ. ಗೋವಿಂದರಾಜುವನ್ನು ನನ್ನ ಪರವಾಗಿ ವಿಚಾರಣೆ ಮಾಡಿಸುವ ಅವಶ್ಯಕತೆ ಇಲ್ಲ. ನಾನು ಪ್ರತಿವಾದಿಗೆ ಯಾವುದೇ ನೋಟಿಸ್ ಕೊಟ್ಟಿಲ್ಲ. ನಾನು ದಾವೆ ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿಗೆ ಮೌಖಿಕವಾಗಿ ಹಣ ಕೇಳಿರುತ್ತೇನೆ.

**4.** ನನ್ನ ಮುಖ್ಯ ವಿಚಾರಣೆಯನ್ನು ನಾನು ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ನಾನು ಪ್ರತಿವಾದಿಗೆ ಯಾವುದೇ ಹಣ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲಾತಿ ಸೃಷ್ಟಿ ಮಾಡಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

1 ನೇ ಅಪರ ಸಿ.ಜೆ. ಮತ್ತು ಜೆಎಂಎಫ್.ಸಿ
ಮಳವಳ್ಳಿ